ಗಾತ್ರದ ಬ್ಲಾಕ್ ಹೋಲ್‌ನಲ್ಲಿ ಇಡೀ ನಮ್ಮ ಸೌರಮಂಡಲವನ್ನು ಅಳವಡಿಸಬಹುದಾಗಿದ್ದಲ್ಲಿ ಕೋಣನ ಕೊಂಬಿನ ತುದಿಯಲ್ಲಿ ಏಳು ನೂರು ಪಟ್ಟಣಗಳಿರುವುದು ಏನಂಥ ಸೋಜಿಗವಾಗಬಲ್ಲದು!

◆ **ರಂಗಭೂಮಿಯ ನಿಮ್ಮ ತಾತ್ವಿಕತೆ ರೂಪುಗೊಂಡ ಬಗೆ ಹೇಗೆ?**

ನಾನು ನೆನ್ನೆ ಮೊನ್ನೆ ನಾಟಕಗಳನ್ನು ಬರೆಯಲು ಶುರು ಮಾಡಿದವನಲ್ಲ; ಹೈಸ್ಕೂಲಿನಲ್ಲಿದ್ದಾಗಲೇ ನಾಟಕಗಳನ್ನು ಬರೆದು ನಾನೇ ಆಡಿಸುತ್ತಿದ್ದೆ. ಹೋರಾಟದ ಬದುಕಿಗೆ ಬಂದ ಮೇಲೆ ಅನೇಕ ಇಶ್ಯೂಗಳ ಮೇಲೆ ಬೀದಿ ನಾಟಕಗಳನ್ನು ಮಾಡಬೇಕಾಗಿ ಬಂತು. ಆಗ ರಾತ್ರಿ ನಾಟಕ ಬರೆದು, ಬೆಳಗ್ಗೆ ರಿಹರ್ಸಲ್ ಮಾಡಿ, ಮಧ್ಯಾಹ್ನ ಪ್ರದರ್ಶನ ಮಾಡುತ್ತಿದ್ದೆವು. ಅದರ ಜೊತೆಗೆ ಪ್ರೊಸೀನಿಯಂ ಥಿಯೇಟರ್‌ಗೆ ಕೂಡ ನಾಟಕಗಳನ್ನು ಬರೆದಿದ್ದೇನೆ. ತುರ್ತು ಪರಿಸ್ಥಿತಿಯನ್ನು ಆಧರಿಸಿ 'ಕಳೆದುಹೋದ ಪಥಿಕರು' ಅನ್ನೋ ನಾಟಕ ಬರೆದಿದ್ದೆ. ಪ್ರತಿಯೊಂದು ನಾಟಕ ರಚನೆಯ ಹಿಂದೆಯೂ ನಿರ್ದಿಷ್ಟ ಉದ್ದೇಶವನ್ನಿಟ್ಟುಕೊಂಡೇ ಬರೆದವನು ನಾನು.

ನಮ್ಮಲ್ಲಿ ನಾಟಕ ಬರೆಯುವವರು ತುಂಬಾ ಜನ ಇದ್ದಾರೆ. ಆದರೆ ಅವರ ಒಟ್ಟು ನಾಟಕಗಳ ಹಿಂದೆ ಒಬ್ಬ ಸೂಕ್ಷ್ಮ ಸಂವೇದನೆಯ ನಾಟಕಕಾರನಿಗಿರಬೇಕಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾಳಜಿ, ಬದ್ಧತೆ ಮತ್ತು ಪ್ರಾಮಾಣಿಕತೆ ಕಾಣುವುದಿಲ್ಲ. ಮತ್ತೆ ಕೆಲವರು ಸಮಾಜದ ದೃಷ್ಟಿಯಲ್ಲಿ ಯಾವುದು ಅಬ್ಸೆಸೀವ್ ಆಗಿದೆಯೋ ಆ ಅಬ್ಸೆಷನ್ ಅನ್ನೇ ಕ್ಯಾಪಿಟಲೈಸ್ ಮಾಡಿಕೊಂಡವರು. ಇಂಥ ಜಾತ್ಯತೀತ ಜಾತಿವಾದಿಗಳಿಂದಲೇ ಈ ನೆಲದ ಮೂಲಸತ್ವ ನಶಿಸುತ್ತಿರುವುದು. ನನ್ನ ಮಟ್ಟಿಗೆ ಇಂಡೀಜಿನಸ್ ಮತ್ತು ರಿಚುಯಲಿಸ್ಟಿಕ್ ಥಿಯೇಟರ್‌ಗಳೇ ನೆಲಮೂಲದ ಸಂಸ್ಕೃತಿ ಸಂವೇದನೆಗಳನ್ನು ಸಮರ್ಥವಾಗಿ ಮುಟ್ಟಿಸಬಲ್ಲವು ಎಂದು ನಂಬಿದ್ದೇನೆ.



◆ **ಸಾಹಿತ್ಯ, ಹೋರಾಟ ಇತ್ಯಾದಿಗಳ ಮೂಲಕ ನೀವು ಬದುಕಿನಲ್ಲಿ ಕಂಡುಕೊಂಡ ಬಹುದೊಡ್ಡ ಸತ್ಯ ಯಾವುದು? ಇನ್ನೊಂದು ರೀತಿಯಲ್ಲಿ ಕೇಳುವುದಾದರೆ, ನಿಮ್ಮ ಬದುಕಿನ ದೊಡ್ಡ ರಿಯಲೈಸೇಷನ್ ಏನು?**

ಜಗತ್ತಿನಲ್ಲಿ ಆತ್ಯಂತಿಕ ಸತ್ಯ ಅನ್ನೋದು ಒಂದಿಲ್ಲ ಅನ್ನೋದೇ ನಾನು ಕಂಡುಕೊಂಡ ದೊಡ್ಡ ಸತ್ಯ. ಮುಖ್ಯ ಏನಪ್ಪಾ ಅಂದರೆ, ಜಗತ್ತಿನ ಯಾವುದೇ ಫಿಲಾಸಫಿ, ತತ್ವದರ್ಶನ ಎಲ್ಲದರ ಮೂಲ ಎಲ್ಲಿದೆ ಅಂದರೆ, ಈ ಜಗತ್ತನ್ನು